# ಶ್ರೀ ಸುತ್ತೂರು ಮಠ (ಮೈಸೂರು ಶಾಖೆ)

ಚಾಮುಂಡಿಬೆಟ್ಟದ ತಪ್ಪಲು, ಮೈಸೂರು

# ಬೆಳದಿಂಗಳ ಸಂಗೀತ 235

## ಡಿಜಿಟಲ್ ಮಾಧ್ಯಮ

**20 ಅಕ್ಟೋಬರ್ 2021 * ಬುಧವಾರ * ಸಂಜೆ 6.00**

ದಿವ್ಯ ಸಾನ್ನಿಧ್ಯ

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಸುತ್ತೂರು ಶ್ರೀಕ್ಷೇತ್ರ

## ಕೊಳಲು ವಾದನ



ವಿದ್ವಾನ್ ಎನ್. ರಾಜಕಮಲ್



ವಿದ್ವಾನ್ ಸುಮಂತ್ ಮಂಜುನಾಥ್
ವಯೊಲಿನ್



ವಿದ್ವಾನ್ ಜಿ.ಎಸ್. ರಾಮಾನುಜಂ
ಮೃದಂಗ

ಆನ್‌ಲೈನ್ ಮೂಲಕ ನೇರವಾಗಿ ವೀಕ್ಷಿಸಲು ಸರ್ವರಿಗೂ ಹಾರ್ದಿಕ ಸ್ವಾಗತ

YouTube http://Youtube.com/c/JSSMahavidyapeethaonline

f LIVE https://www.facebook.com/JSSMVP

LIVE STREAMING

**ವಿದ್ವಾನ್ ಎಸ್. ರಾಜಕಮಲ್**ರವರು ರಾಜ್ಯದ ಹಿರಿಯ ಕೊಳಲು ವಾದಕರಲ್ಲೊಬ್ಬರು. ಪ್ರಾರಂಭಿಕ ಸಂಗೀತ ಶಿಕ್ಷಣ ವಿದ್ವಾನ್ ಎಸ್.ಎ. ಶಶಿಧರ್‌ರವರ ಬಳಿ ಪ್ರಾರಂಭಿಸಿ, ಅನಂತರ ಸಂಗೀತ ಕಲಾ ಆಚಾರ್ಯ ವಿದುಷಿ ನೀಲಾ ರಾಮಗೋಪಾಲ್ ಮತ್ತು ಪದ್ಮಶ್ರೀ ಡಾ. ಎನ್. ರಮಣಿಯವರಲ್ಲಿ ಉನ್ನತ ಸಂಗೀತ ತರಬೇತಿ ಪಡೆದರು.

ಕೇಂದ್ರ ಸರ್ಕಾರದಿಂದ ಪ್ರತಿಭಾ ಶಿಷ್ಯವೇತನವನ್ನು ಪಡೆದಿದ್ದಾರೆ. ಹಲವಾರು ಸೋಲೋ ಆಲ್ಬಂಗಳನ್ನು ಹೊರತಂದಿದ್ದಾರೆ. ಶಾಸ್ತ್ರೀಯತೆ, ಆಧುನಿಕತೆ, ಪ್ರಯೋಗಶೀಲತೆ, ಮಾಧುರ್ಯ ಮತ್ತು ಸಂಪ್ರದಾಯಶುದ್ಧಿ ಇವರ ವಾದನದ ವೈಶಿಷ್ಟ್ಯಗಳು. ಅಮೆರಿಕ, ಇಂಗ್ಲೆಂಡ್, ಕೆನಡ, ಜರ್ಮನಿ, ಇಟಲಿ, ಪೋಲೆಂಡ್, ಬೆಲ್ಜಿಯಂ, ಇಸ್ರೇಲ್, ಸಿಂಗಪುರ ಮುಂತಾದ ದೇಶಗಳಲ್ಲಿ ಕಾರ್ಯಕ್ರಮ ನೀಡಿದ್ದಾರೆ. ಪೋಲೆಂಡಿನ ವಿಶ್ವವಿಖ್ಯಾತ "ಸಿಂಫೋನಿಯಾ ಬಾಲ್ಟಿಕಾ" ಆರ್ಕೆಸ್ಟ್ರಾದಲ್ಲಿ, ಇಸ್ರೇಲಿನ ವರ್ಲ್ಡ್ ಸೇಕ್ರೆಡ್ ಮ್ಯೂಸಿಕ್ ಫೆಸ್ಟಿವಲ್‌ನಲ್ಲಿ ಭಾಗವಹಿಸಿದ್ದಾರೆ. ರಾಷ್ಟ್ರದ ಪ್ರತಿಷ್ಠಿತ ಸಂಗೀತಗಾರರ ಜೊತೆ ಜುಗಲ್‌ಬಂದಿ ಮತ್ತು ಫ್ಯೂಷನ್ ಸಂಗೀತದ ಕಾರ್ಯಕ್ರಮಗಳನ್ನು ನೀಡುವ ನವೀನತೆ ಇವರ ವಾದನದಲ್ಲಿದೆ.

ಲಯನ್ಸ್ ಕ್ಲಬ್ ಇಂಟರ್‌ನ್ಯಾಷನಲ್ ಸಂಸ್ಥೆಯ "ಯೂತ್ ಐಕಾನ್", ಚೆನ್ನೈನ ಶ್ರೀಕೃಷ್ಣ ಗಾನಸಭೆಯ "ಶರಭ ಶಾಸ್ತ್ರಿ", ಬೆಂಗಳೂರಿನ ಅನನ್ಯ ಕಲ್ಚರಲ್ ಅಕ್ಯಾಡೆಮಿಯ "ಅನನ್ಯ ಪುರಸ್ಕಾರ್" ಮತ್ತು ಶ್ರೀರಾಮ ಲಲಿತಕಲಾ ಮಂದಿರದ "ರಾಗಲಯಪ್ರಭ" ಮುಂತಾದ ಪುರಸ್ಕಾರಗಳು ಇವರಿಗೆ ಲಭಿಸಿವೆ.

**ವಿದ್ವಾನ್ ಸುಮಂತ್ ಮಂಜುನಾಥ್‌ರವರು** ಅಸಾಧಾರಣ ಪ್ರತಿಭಾವಂತ ಉದಯೋನ್ಮುಖ ವಯೊಲಿನ್ ಕಲಾವಿದರು. ಖ್ಯಾತ ಅಂತಾರಾಷ್ಟ್ರೀಯ ವಯೊಲಿನ್ ಮಾಂತ್ರಿಕ ಡಾ. ಮೈಸೂರು ಎಂ. ಮಂಜುನಾಥ್‌ರವರ ಸುಪುತ್ರರು. ದೊಡ್ಡಪ್ಪ ವಿದ್ವಾನ್ ಮೈಸೂರು ಎಂ. ನಾಗರಾಜ್; ತಾತ ಹಿಂದಿನ ತಲೆಮಾರಿನ ಹಿರಿಯ ವಯೊಲಿನ್ ವಿದ್ವಾಂಸರಾದ 'ಸಂಗೀತ ವಿದ್ವಾನ್' ಶ್ರೀ ಎಂ. ಮಹದೇವಪ್ಪನವರು. ಇಂಥ ಕಲಾಶ್ರೀಮಂತಿಕೆಯ ಕೌಟುಂಬಿಕ ಹಿನ್ನೆಲೆಯಿಂದ ಬಂದ ಸುಮಂತ್‌ರವರಿಗೆ ವಯೊಲಿನ್ ನುಡಿಸುವಿಕೆಯ ತಂತ್ರಗಳು, ಸೂಕ್ಷ್ಮತೆಗಳು, ನಯಗಾರಿಕೆಗಳು ಸಹಜವಾಗಿಯೇ ಕರಗತವಾಗಿವೆ. ಇವರು ಶಾಸ್ತ್ರಬದ್ಧತೆ, ಗಾನಶುದ್ಧತೆಗಳೆರಡರಲ್ಲೂ ಸಮನ್ವಯ ಸಾಧಿಸಿದ್ದಾರೆ. ಇರಾನ್‌ನಲ್ಲಿ ನಡೆದ ಭಾರತೀಯ ಸ್ವಾತಂತ್ರ್ಯೋತ್ಸವದ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ತಂದೆಯವರೊಡನೆ ಆಹ್ವಾನಿತರಾಗಿದ್ದರು. ದುಬೈ, ಅಬುಧಾಬಿ ಮುಂತಾದ ಮಧ್ಯಪ್ರಾಚ್ಯ ದೇಶಗಳಲ್ಲಿಯೂ ಇವರ ವಾದನಸುಧೆ ಪರಿಚಿತವಾಗಿದೆ. ಸೃಜನಶೀಲತೆ, ಸ್ವಂತಿಕೆ, ಶ್ರದ್ಧೆಗಳು ಈ ಯುವ ಕಲಾವಿದರ ಉನ್ನತ ಯಶಸ್ಸಿಗೆ ಕಾರಣವಾಗಿವೆ. ವಿದ್ಯೆಗೆ ತಕ್ಕ ವಿನಯ ಇವರ ಮತ್ತೊಂದು ಅನುಕರಣೀಯ ಆದರ್ಶ.

**ವಿದ್ವಾನ್ ಜಿ.ಎಸ್. ರಾಮಾನುಜಂರವರು** ಸಂಗೀತಗಾರರ ಮನೆತನದಿಂದ ಬಂದವರು. ಗಾನಕಲಾಭೂಷಣ ವಿದ್ವಾನ್ ಪಿ.ಜಿ. ಲಕ್ಷ್ಮೀನಾರಾಯಣರವರ ಶಿಷ್ಯರು. ದೇಶವಿದೇಶಗಳಲ್ಲಿ ಹಲವಾರು ಖ್ಯಾತ ಸಂಗೀತಗಾರರಿಗೆ ಮೃದಂಗ ಸಹಕಾರ ನೀಡಿದ್ದಾರೆ. ಸುಸ್ವರಾಲಯ ಸಂಗೀತ ಕಾಲೇಜು ಇತ್ತೀಚೆಗೆ ನೀಡಿರುವ "ಸ್ವರಲಯಶೃಂಗ" ಪುರಸ್ಕಾರವೂ ಸೇರಿದಂತೆ ಹಲವಾರು ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.

# ಬೆಳದಿಂಗಳ ಸಂಗೀತ 236

**19 ನವೆಂಬರ್ 2021**



## ಗಾಯನ

**ವಿದುಷಿ ಮಹತೀ ರಘುರಾಮ್**

## ವಯೊಲಿನ್

**ವಿದುಷಿ ಸಿ.ವಿ. ಶ್ರುತಿ**





## ಮೃದಂಗ

**ವಿದ್ವಾನ್ ನಂದನ್ ಕಶ್ಯಪ್**

ಫೋನ್: 0821–2548221, 2548223 * ಇಮೇಲ್: sutturmath@jssonline.org